ನೆರೆದುಬಿಡುತ್ತಿತ್ತು. ಅವನ ಜೊತೆ ಜೋಡು ಹಲಗೆಗೆ ನಿಲ್ಲಲ್ಲು ಹನುಮಂತನಿಗೆ ಬಲೇ ಖುಷಿ. ಅಪ್ಪನ ಜೊತೆಗೆ ಹಾಡಲು ಇರುತ್ತಿದ್ದ ಹಿಂಜರಿಕೆ ಇಲ್ಲಿ ಇಲ್ಲವಾಗುತ್ತಿತ್ತು. ಇಬ್ಬರೂ ಜೋಡುದನಿಯಲ್ಲಿ ದನಿ ತೆಗೆದರೂ ಅಂದ್ರೆ ಹನುಮಂತನ ಮೈ ಚಳಿಯೆಲ್ಲಾ ಬಿಟ್ಟು ಹೋಗುತ್ತಿತ್ತು.

ಆ ಘಟ್ಟ ಈ ಘಟ್ಟ ನೆಗೆದು ಬಿದ್ದರೆ ನಾಗರ ಘಟ್ಟ ಮುಂದೋಡೋ ಹುಡುಗೀಗೆ
ಮುಂದೋಗೋ ಹುಡುಗೀಗೆ/ ಕರಿಯವ್ವ ಹಿಂದೆ ಬರೋ ಹುಡುಗಿಗೆ.

ದಾಸನಳ್ಳಿ ಹೆಣ್ಣೆ ಜಾರಿ ಬಿದ್ದರೆ ಮಣ್ಣೆ ಶೀಮೊಗ್ಗದೆಣ್ಣೆ
ಶೀಮೊಗ್ಗದೆಣ್ಣೆ / ಆದಾರೆ ಅಂತರಗಟ್ಟೆ ಹೆಣ್ಣೆ ಅರಗಿಣೆ
ಇಬ್ಬರು ಹೆಂಡಿರ ಮೇಲೆ ಕದ್ದು ಸೂಳೆ ಹೋದ ಕಬ್ಬಿಣದ ಕದವ ಮುರ್ಕಂಡು
ಕಬ್ಬಿಣದ ಕದವ ಮುರ್ಕಂಡು/ತಿಮ್ಮಯ್ಯ ಅವನು ಇದ್ದಾನು ಸೂಳೆ ಮನೆಯಾಗೆ.

ಏರಿಯ ಮೇಲೊಂದು ಸಾರಂಗ ಮೆಯ್ತ್ತಿತಿ ಸಾರಂಗ ಮೆಯ್ದು ಮಿಕ ಮೆಯ್ದು
ಸಾರಂಗ ಮೆಯ್ದು ಮಿಕ ಮೆಯ್ದು / ಪಿಳೇಗಿನಮ್ಮ ಕೋರುಡುಗೀರ ಗಮ್ಮೆಂದು

ಇಂತಾ ಪದಗಳಂತೂ ಬಲೇ ಸಂಭ್ರಮದಿಂದ ಬಂದುಬಿಡುತ್ತಿದ್ದವು. ಚೆನ್ನಣ್ಣನ ನೆಂಟಸ್ತಿಕೆ ಮಾಡುವ ಮೊದಲು ಅಪ್ಪ ಅವನು ಗೆಳೆಯರು. ಚೆನ್ನಣ್ಣ ಅಪ್ಪನ ವಾರಿಗೆಯವನಾದರೂ ಹನುಮಂತನ ಜೊತೆ ಯಾವ ಎಗ್ಗೂ ಇಲ್ಲದೆ ಅದೇ ವಯಸ್ಸಿನವನ ತರಾ ಮಾತಾಡುತ್ತಿದ್ದ. ಹನುಮಂತ ಒಂದುಸಾರಿ ಚೆನ್ನಣ್ಣನ್ನ, 'ಮಾವೋ, ಈ ಬಂಡುಪದ ಯಾಕೆ ಆಡಬೇಕು? ಇವುನ್ನೇ ಯಾಕೆ ಆಡುಸ್ತಾರೆ?' ಎಂದು ಕೇಳಿದ್ದ. ಅದಕ್ಕೆ ಅವನು, 'ನೀನು ಸರಿಯಾದ ಅಳಿಯ ಕಣೋ, ಕೇಳ್ತಾ ಕೇಳ್ತಾ ಬುಡಕ್ಕೆ ಬಂದೆ ನೋಡು', 'ಅಲ್ಲಾ ಕಣ್ ಮಾವೋ, ದೇವ್ರ ಎದುರಿಗೆ ಇವು ಬೇಕಾ?' ಅಂದದ್ದಕ್ಕೆ. 'ಇವು ದೇವ್ರಿಗೆ ಅಂತಾ ಅಲ್ಲಾ ಕಣೋ, ಎಲ್ಲ ಮನುಸ್ರಿಗೂ ಬೇಕು. ಎಲ್ಲರ ಮನಸ್ಸಿಗೂ ಬೇಕೂ. ಇವೊಂಥರಾ ಪಾತ್ರೆ ತೊಳೆದು ಬೆಳಗಕ್ಕೆ ಕಟಗಾ ಅಂತಾ ಇರಲ್ವಾ ಆ ತರಾ. ದಿನಾ ಎಲ್ಲಾನೂ ಉಜ್ಜಿ ಬೆಳಗಿ ಪಳಪಳಾ ಹೊಳಿಯಂಗೆ ಇಟ್ಕಬೇಕು. ಇಲ್ದೇ ಹೋದ್ರೆ ಎಲ್ಲ ಕಿಲುಬು ಇಡಿಯುತ್ತೆ. ಗುಡೀ ಕಳಸಾ ಆಗಲೀ ಮನುಸ್ರ ಮನಸೇ ಆಗಲೀ ಎಲ್ಲಾನೂ ಚೆನ್ನಾಗಿ ದಿನಾ ತೊಳೀಬೇಕು. ಸಂಸಾರ ಅಂದ್ರೆ ಹರಿಯೋ ಕಾಲುವೆ ಇದ್ದಂಗೆ. ಕಸಕಡ್ಡಿ ಸೇರ್ತಿರ್ತವೆ, ಹುಲ್ಲು ಜೊಂಡು ಬೆಳ್ಕತಿರ್ತವೆ. ಅವುನ್ನೆಲ್ಲ ತಗದು ನೀರ ಹರಿಬಿಡಬೇಕು. ಕಟ್ಕಂಡಿರೋ ಗದರು ಹೊಂಟೋಗಬೇಕು ಆಗ ಹೊಸನೀರು ಬತ್ತದೆ' ಎಂದು ಹೇಳಿದ್ದ. ಅದಕ್ಕೆ ಹನುಮಂತ, 'ಅವಳು ದೇವರಲ್ವ? ಅವಳೆದುರಿಗೆ ಅವಳುನ್ನ ಹೊಗಳೋ ಪದಾ ಹಾಡಿದರೆ ಸಾಕಲ್ವ?' ಅಂತಾ ಕೇಳಿದ್ದ. ಅದಕ್ಕೆ ಇವನನ್ನೆ ದಿಟ್ಟಿಸಿ ನೋಡಿದ ಚೆನ್ನಣ್ಣ, 'ಅದು ಅಂಗಲ್ಲ ಕಣ್ಲಾ, ಅಮ್ಮ ಬೇರೇವ್ರಿಗೆ ದೇವರು ಕಣ್ಲಾ ನಮಿಗೆ ಮಾತ್ರ ಸಂಬಂಧೀಕಳು. ಸಂಬಂಧದಿಂದಲೇ ಸಂತೋಸ ಆನಂದ ಕಣೋ. ಅದರಲ್ಲೂ ಗಂಡು ಹೆಣ್ಣಿನ ಸಂಬಂಧ ಐತಲ್ಲಾ. ಅದು ಪರಮ ಐಭೋಗ. ಅಂತಾ ಐಭೋಗದಿಂದ ಅವಳನ್ನು ಸುಂಗರಿಸಿದಾಗಲೇ ಆನಂದವಾಗಿ ಅವಳು ಒಲಿಯೋದು. ಅವಳನ್ನು ಒಲಿಸಿಕೊಳ್ಳಾಕೆ ಬಂಡುಪದಗಳು ಬೇಕೇಬೇಕು. ಅವನ್ನು ಹಾಡೋವಾಗ ಅವಳ ಮಕಾ ನೋಡಿದೀಯಾ. ಅಂಗೇ ಎದ್ದುಬರೋ ಹಂಗೆ ಕಾಣ್ತದೆ.' ಹನುಮಂತನಿಗೆ ಅದೇನೋ ಸರಿ ಅನ್ನಿಸಿದರೋ 'ದೇವಾನು ದೇವತೆಗಳನ್ನೆಲ್ಲ ಹೆತ್ತು ಸಾಕಿದೋಳ ಎದುರಿಗೆ ನಿಂತುಕಂಡು ಹಿಂಗೆ ಅನ್ನೋದು ಆಡೋದು ಸರಿಯಾ?' ಅಂದ. 'ನಿಜಾ ಕಣೋ ಅವಳೇನೋ ದೇವಾನುದೇವತೆಗಳನ್ನೆಲ್ಲ ಹೆತ್ತೋಳಿರಬೈದು. ಆದರೆ ನಮಿಗೆ ಅವಳು ಕುಲದ ಸಂಬಂಧ. ನಮ್ಮ ಕುಲಾ ಮುಂದುವರಿಸೋಳು.